ಕಳಕೊಂಡ ನನ್ನ ಮಾವ ದ್ಯುಮತ್ಸೇನ ಮಹಾರಾಜರು ಪುನಃ ಅವುಗಳನ್ನು ಗಳಿಸಿಕೊಳ್ಳಲಿ.

**ಯಮಧರ್ಮ:** ತಥಾಸ್ತು. ನಿನ್ನ ಇಚ್ಛೆ ನೆರವೇರಿಸಿದೆ ಸಾವಿತ್ರಿ. ಈಗ ಹಿಂತಿರುಗಿ ಹೋಗು.

(ಯಮ ಮುಂದೆ ಹೋಗುತ್ತಾ ಹಿಂತಿರುಗಿ ನೋಡಲು, ಸಾವಿತ್ರಿ ಆತನನ್ನು ಅನುಸರಿಸುತ್ತಿರುವಳು)

**ಯಮಧರ್ಮ :** ದೇವಿ ಸಾವಿತ್ರಿ, ಇದೇನು ನಿನ್ನ ಹಟ?

**ಸಾವಿತ್ರಿ :** ಹಟವಲ್ಲ ದೇವ. ಪತಿಯನ್ನು ಅನುಸರಿಸುವ ಸತಿಧರ್ಮ. ನಿನ್ನ ಧರ್ಮವ ನೀನು ಮಾಡುತ್ತಿರುವೆ. ನನ್ನ ಧರ್ಮವ ನಾನು ಮಾಡಬಾರದೇ ತಂದೆ?

**ಯಮಧರ್ಮ:** ನರರು ನರಲೋಕದ ನಿಯಮಕ್ಕೆ ಬದ್ಧರು. ನಾನು ಒಯ್ಯುತ್ತಿರುವ ಜೀವವು ಈಗ ನನ್ನದಾಯಿತು ಸಾವಿತ್ರಿ. ಅದರ ಮೇಲೆ ನಿನಗಧಿಕಾರವಿಲ್ಲ. ಸಾವಿತ್ರಿ, ಸತ್ಯವಾನನನ್ನು ನಾನೆಲ್ಲಿಗೊಯ್ಯುತ್ತಿರುವೆ ಗೊತ್ತೇನು?

**ಸಾವಿತ್ರಿ :** ಎಲ್ಲಾದರೇನು ತಂದೆ, ಪತಿಯಿದ್ದೆಡೆ ಸತಿ. ನರಕಕ್ಕೊ, ನಾಕಕ್ಕೊ ಎಲ್ಲಾ ಒಂದೇ. ಒಲಿದೆರಡು ಜೀವಗಳು, ಒಲಿದೆರಡು ಮನಸ್ಸುಗಳು ಎಲ್ಲಿರುವವೋ ಅದೇ ಸ್ವರ್ಗ. ಆದರೆ ದೇವ, ಧರ್ಮದೇವ, ನಾನು ನಾನಾಗಿ ನಿನ್ನನ್ನು ಅನುಸರಿಸುತ್ತಿಲ್ಲ. ನನ್ನ ಜೀವದ ಜೀವವನ್ನು ನೀನು ಪಾಶದೊಳು ಬಿಗಿದೊಯ್ಯುತ್ತಿರುವಾಗ ನನ್ನ ಜೀವ ಹೀಗೆ ಸೂಕ್ಷ್ಮರೂಪದಲ್ಲಿ ಆತನನ್ನು ಅನುಸರಿಸಬಾರದೆ?

**ಯಮಧರ್ಮ :** ನಿನ್ನ ಸತಿಧರ್ಮಕ್ಕೆ ತಲೆ ಬಾಗುವೆನು. ಹಿಂತಿರುಗಿ ಹೋಗಿ, ಅತ್ತೆ ಮಾವಂದಿರ ಸೇವೆ ಮಾಡು. ಅದು ನಿನ್ನ ಕರ್ತವ್ಯವಲ್ಲವೇ?

**ಸಾವಿತ್ರಿ :** ಅದೂ ಕರ್ತವ್ಯ ನಿಜ. ನೊಂದ ಮಾತಾಪಿತರು ತಮ್ಮ ಮಗನೆಲ್ಲಿ ಎಂದು ನನ್ನನ್ನು ಕೇಳಿದರೆ, ನಾನು ಏನೆನ್ನಲಿ? ಯಮಧರ್ಮನಿಗೆ ಒಪ್ಪಿಸಿದೆ ಎನ್ನಲೆ? ಅವರ ಅಳಲನ್ನು ನಾನು ನೋಡಲಾರೆ. ಸಾಂತ್ವನಗೊಳಿಸಲು, ಅವರ ಮಗನನ್ನು ಹಿಂತಿರುಗಿಸು. ನನ್ನ ಪತಿಯನ್ನು ನಾನು ಅನುಸರಿಸುವುದು ನನ್ನ ಪರಮಧರ್ಮ ಎಂದು ನಾನು ತಿಳಿದಿದ್ದೇನೆ, ತಂದೆ.

**ಯಮಧರ್ಮ :** ನಿನ್ನ ಸತಿಧರ್ಮಕ್ಕೆ ಮೆಚ್ಚಿದೆ ಮಗಳೇ– ನೀನು ಇನ್ನೊಂದು ವರವನ್ನು ಕೇಳು. ಸಂತಸದಿಂದ ಕರುಣಿಸುವೆನು. ಆದರೆ ಸತ್ಯವಾನ್‌ನ ಜೀವವನ್ನು ಕೇಳದಿರು.

**ಸಾವಿತ್ರಿ :** ನಾನು ಧನ್ಯೆ ತಂದೆ. ನೀನು ವರವನ್ನು ನೀಡುವುದಾದರೆ ನನ್ನ ಮಾವ ದ್ಯುಮತ್ಸೇನ ಮಹಾರಾಜರು ತಾವು ಕಳೆದುಕೊಂಡ ರಾಜ್ಯವನ್ನು ಪುನಃ ಪಡೆಯಲಿ.

**ಯಮಧರ್ಮ :** ತಥಾಸ್ತು. ಆ ಸಂತಸದ ಸುದ್ದಿಯನ್ನು ಶೀಘ್ರವೇ ಹೋಗಿ ತಿಳಿಸು. ಬಹಳ ದೂರ ಬಂದು ದಣಿದಿರುವೆ ನೀನು (ಯಮನು ಮುಂದಕ್ಕೆ ಅಡಿ ಇಡುವನು) (ಹಿಂಬಾಲಿಸುತ್ತಿರುವ ಸಾವಿತ್ರಿಯನ್ನು ನೋಡಿ, ಗಡುಸಾಗಿ) ಸಾವಿತ್ರಿ, ನನ್ನೊಡನೆ ಹಟಸಾಧನೆ ನಿನಗೆ ಒಳಿತಲ್ಲ. ಹಿಂತಿರುಗು, ಮರುಳೇನು ನಿನಗೆ? ಮರಳು ಬೇಗ.

**ಸಾವಿತ್ರಿ :** ದೇವಾ ಕ್ಷಮಿಸು. ನಾನು ನನ್ನ ಇಚ್ಛೆಯಿಂದ ಬರುತ್ತಿಲ್ಲ. ಯಾವುದೋ ಶಕ್ತಿ ನನ್ನನ್ನು ಒಯ್ಯುತ್ತಿದೆ. ನನ್ನ ಸ್ಥಿತಿಯನ್ನು ಅರ್ಥ ಮಾಡಿಕೋ ತಂದೆ. ಬಯಸಿ ಸತ್ಯವನ್ನು ವರಿಸಿ, ಸತ್ಯದೊಡನೆ ಜೀವಿಸಿದ ನಾನು ಸತ್ಯವನ್ನುಳಿದು ಜೀವಿಸಲಾರೆ. ನಮ್ಮದು ಪ್ರಕೃತಿ ಪುರುಷ ಸಮ್ಮಿಳನದಂತೆ ಐಕ್ಯಗೊಂಡಿರುವುದು. ಆ ಶಕ್ತಿಯೇ ನನ್ನನ್ನು ಇಲ್ಲಿಯವರೆಗೆ ಬರಮಾಡಿಸಿದೆ.

**ಯಮಧರ್ಮ :** ಧೀರೆ ಸಾವಿತ್ರಿ, ನೀನು ಬಹಳ ಜಾಣೆ. ನಿನ್ನಂತಹ ಸುಜ್ಞಾನಿಯನ್ನು ನಾನು ಈವರೆಗೆ ಕಂಡಿಲ್ಲ. ನಿನ್ನ ಜಾಣ್ಮೆಗೂ, ಪ್ರೇಮಕ್ಕೂ ಮೆಚ್ಚಿ, ಇನ್ನೊಂದು ವರವನ್ನು ಕರುಣಿಸುವೆ. ಸತ್ಯವಾನನ ಆತ್ಮವನ್ನು ಬಿಟ್ಟು ಏನು ಬೇಕಾದರೂ ಕೇಳು.

**ಸಾವಿತ್ರಿ :** ಧರ್ಮದೇವಾ, ನೀನು ಮೆಚ್ಚಿ ವರವನ್ನು ಕರುಣಿಸುವುದಾದರೆ, ದ್ಯುಮತ್ಸೇನ ಮಹಾರಾಜ ತನ್ನ ರಾಜ್ಯದ ಸ್ವರ್ಣ ಸಿಂಹಾಸನದಲ್ಲಿ ಕುಳಿತು ನನ್ನ ಮಗನಿಗೆ ಉಣಿಸುವುದನ್ನು, ನಾನು ನನ್ನ ತಮ್ಮಂದಿರೊಡಗೂಡಿ ನೋಡುವ ಭಾಗ್ಯವನ್ನು ದಯಪಾಲಿಸು ಧರ್ಮದೇವಾ.

**ಯಮಧರ್ಮ :** ಮೆಚ್ಚಿದೆ, ಮೆಚ್ಚಿದೆ ನಿನ್ನ ವಿದ್ವತ್ತಿಗೆ, ವಾಕ್ಚಾತುರ್ಯಕ್ಕೆ, ತರ್ಕಕ್ಕೆ. ನಿನ್ನ ಬುದ್ಧಿವಂತಿಕೆಯ ಮಾತಿಗೆ, ನಿನ್ನ ಧರ್ಮಜ್ಞಾನಕ್ಕೆ ಮೆಚ್ಚಿದೆ. ತಥಾಸ್ತು ಸಾವಿತ್ರಿ ನಿನ್ನ ಇಷ್ಟಾರ್ಥ ಸಿದ್ಧಿಸಲಿ. ಸ್ತ್ರೀಯು ಉಭಯ ಕುಲಕ್ಕೂ ಮೋಕ್ಷದಾತೆಯೆಂಬುದು ಸುಳ್ಳಲ್ಲ. ಧನ್ಯೆ ಸಾವಿತ್ರಿ. ನಿನ್ನಂಥಾ ಸತಿಯನ್ನು ನಾನು ಹಿಂದೆ ಕಂಡಿಲ್ಲ. ಮುಂದೆ ಅಂಥವರು ಹುಟ್ಟುವುದು ದುರ್ಲಭ. ನಿನ್ನ ಶ್ರೇಯೋಭಿವೃದ್ಧಿಯಾಗಲಿ, ನಿನ್ನ ವಂಶ ಬೆಳಗಲಿ.

**ಸಾವಿತ್ರಿ :** ಪೂಜನೀಯ ತಂದೆ, ವಂದಿಸುವೆ. ಸಂತಸದಿಂದ ಹಿಂತಿರುಗುವೆ. ಆದರೆ ಸತ್ಯವಾನನನ್ನು ನೀನು ನಿನ್ನ ಪಾಶದಿಂದ ಬಿಡುಗಡೆ ಮಾಡಬೇಕಲ್ಲವೆ?

**ಯಮಧರ್ಮ :** ಅದೇನು ಮಾತು ಸಾವಿತ್ರಿ? ಎಂದಿಗೂ ಅದು ನಡೆಯದ ಮಾತು.

**ಸಾವಿತ್ರಿ :** ಧರ್ಮದೇವ, ನಿನಗೆ ಧರ್ಮ ಬೋಧಿಸಲು ನಾನಾರು? ಆದರೂ ನಿನ್ನ ಮಾತನ್ನು ನಿನಗೆ ನೆನಪಿಸುವೆ. ನನ್ನ ಮೇಲೆ ಕರುಣೆ ಇಟ್ಟು, "ನಿನ್ನ ಶ್ರೇಯೋಭಿವೃದ್ಧಿಯಾಗಲಿ, ನಿನ್ನ ವಂಶೋಭಿವೃದ್ಧಿಯಾಗಲಿ" ಎಂದು ನೀನು ಹರಸಿದೆ. ಸತ್ಯವಾನ್‌ನನ್ನು ಹಿಂತಿರುಗಿಸದಿದ್ದರೆ ನೀನು ವಚನಭ್ರಷ್ಟನಾಗುವೆಯಲ್ಲವೇ ದೇವಾ? ಸತ್ಯವಾನನಿಲ್ಲದೆ ನನ್ನ ವಂಶಾಭಿವೃದ್ಧಿ ಹೇಗಾಗುವುದು ದೇವಾ?

**ಯಮಧರ್ಮ :** ಧರ್ಮವನ್ನು ಧರ್ಮದಿಂದ ಗೆದ್ದೆ. ವಿಧಿನಿಯಮವನ್ನು ಮೀರಿದ ಶಕ್ತಿಯೊಂದಿದೆ ಎಂಬುದನ್ನು ಜಗತ್ತಿಗೆ ತಿಳಿಸಿದೆ. ಆ ಶಕ್ತಿ ನೀನೇ ಸಾವಿತ್ರಿ, ನಿನಗೆ ವಂದಿಸುವೆನು. ನಿನ್ನ ಜಾಣ್ಮೆಯಿಂದ ನಿನ್ನ ಮಾವನಿಗೆ ದೃಷ್ಟಿಯನ್ನು ರಾಜ್ಯವನ್ನು ಗಳಿಸಿರುವುದಲ್ಲದೆ ಪುತ್ರಹೀನನಾದ ನಿನ್ನ ತಂದೆ ಅಶ್ವಪತಿ ರಾಜನಿಗೆ ಪುತ್ರ ಸಂತಾನವನ್ನು ದೊರಕಿಸಿಕೊಟ್ಟೆ. ನನ್ನನ್ನು ನನ್ನ ಮಾತಿನಲ್ಲೇ ಸಿಕ್ಕಿಸಿ ನಿನ್ನ ಪತಿಯನ್ನು ನಿನ್ನಲ್ಲೇ ಉಳಿಸಿಕೊಂಡೆ. ಜಗದ್ವಂದ್ಯೆ ನೀನು ಮೃತ್ಯುಂಜಯೆ ನೀನು. ಸತ್ಯವೇ ನೀನು. ನಿನ್ನ ಮುಂದೆ ನಾನು ಸೋಲನ್ನು ಒಪ್ಪಿಕೊಂಡೆ. ನಿನ್ನ ಪತಿಯನ್ನು ನಿನಗೆ ಹಿಂತಿರುಗಿಸಿರುವೆ, ಸತ್ಯವಾನ್ ಮತ್ತು ಸಾವಿತ್ರಿಯನ್ನು ಬೇರ್ಪಡಿಸಲು ವಿಧಿಗೆ ಸಾಧ್ಯವಿಲ್ಲ. ಸತಿ ಸಾವಿತ್ರಿ ನೀನು ಮೃತ್ಯುಂಜಯೆ ಎಂಬ ಹೆಸರಿನಿಂದ ಜಗದ್ವಂದ್ಯೆಯಾಗಿ ಬಾಳು. ವಿಧಿ ನಿಯಮವನ್ನು ಗೆದ್ದಿರುವ ನಿನ್ನ ಪ್ರೇಮ ಅಮರ. ಪ್ರೀತಿಯಿಂದ ಜಗತ್ತನ್ನೆ ಗೆಲ್ಲಬಹುದು ಎಂಬುದನ್ನು ನೀನು ತೋರಿಸಿಕೊಟ್ಟೆ. ಹೋಗು, ಸುಖಿಯಾಗಿ ಬಾಳು ಸಾವಿತ್ರಿ.

**ಸಾವಿತ್ರಿ :** (ಕೈಮುಗಿದು ತಲೆಬಾಗಿ) ನಿನಗೆ ಚಿರಋಣಿ ನಾನು. ಧರ್ಮದೇವ, ವಂದಿಸುವೆ. (ಯಮರಾಜನ ನಿರ್ಗಮನ. ಸತ್ಯವಾನ್ ಮಲಗಿದಲ್ಲಿಂದ ನಿದ್ದೆಯಿಂದ ಎದ್ದವನಂತೆ ಎದ್ದು ಕುಳಿತುಕೊಳ್ಳುವನು. ಸಾವಿತ್ರಿ ಅವನನ್ನು ಹಿಡಿದು ನಿಲ್ಲಿಸುವಳು. ಸಾವಿತ್ರಿಯ ಹೆಗಲ ಮೇಲ ಕೈಯಿಟ್ಟು ಸತ್ಯವಾನ್ ಎರಡು ಹೆಜ್ಜೆ ಮುಂದೆ ಬರುವನು. (ಪರದೆ)

(*ಸೂಚನೆ:* ಸಾವಿತ್ರಿ ಯಮನೊಡನೆ ಮಾತಾಡುವಾಗ ಆರಂಭದಲ್ಲಿ ಕುಳಿತಿರಬೇಕು. ಯಮನನ್ನು ಹಿಂಬಾಲಿಸುವ ದೃಶ್ಯವನ್ನು ನೀಲಿ ಪರದೆಯ ಮುಂದೆ ತೋರಿಸಬೇಕು. ಮೋಡಗಳು ಮೇಲೆ ನಡೆದಂತೆ ರಂಗವನ್ನು ಸಜ್ಜುಗೊಳಿಸಬಹುದು. ಯಮನು ಪಾಶದಿಂದ ಸತ್ಯವಾನನನ್ನು ಬಂಧಿಸಿ, ಮುಂದೆ ಅಡಿ ಇಡುವಾಗ ಬೆಳಕು ಆರಿಸಿ, ನೀಲಿ ಪರದೆಯ ಮುಂದೆ ಯಮ ಮತ್ತು ಸಾವಿತ್ರಿಯರನ್ನು ತೋರಿಸಬೇಕು. ಯಮನಿಂದ ಸಾವಿತ್ರಿ ಬೀಳ್ಕೊಂಡಾಗಲೂ ಬೆಳಕು ಆರಿಸಿ, ಮಲಗಿದ್ದ ಸತ್ಯವಾನನ ಬಳಿ ಧ್ಯಾನಾಸಕ್ತಳಂತೆ ಕುಳಿತ ಸಾವಿತ್ರಿಯನ್ನು ತೋರಿಸಿ, ಬಳಿಕ ಧ್ಯಾನದಿಂದ ಎಚ್ಚತ್ತಂತೆ ತೋರಿಸಿ, ಆಕೆ ಸತ್ಯವಾನನಿಗೆ ಏಳಲು ಸಹಕರಿಸಬೇಕು.) ◆